ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) 1997-98 ನೇ ಸಾಲಿನಲ್ಲಿ ರಾಜ್ಯದಲ್ಲಿ ಕೆಳಕಂಡಂತೆ ಪ್ರಮಾಣೀತ : ಗುಣಮಟ್ಟದ ಬಿತ್ತನೆಯನ್ನು ಸರಬರಾಜು ಮಾಡಲಾಗಿರುತ್ತದೆ.

	ಸಂಖ್ಯೆ	ಸರಬರಾಜಾದ ಪ್ರಮಾಣ ಟನ್‌ಗಳಲ್ಲಿ
1.	ರಾಜ್ಯ ಬೀಜ ನಿಗಮ	15066
2.	ರಾಷ್ಟ್ರೀಯ ಬೀಜ ನಿಗಮ	1219
3.	ಕೆ.ಒ.ಎಫ್	2266
	ಒಟ್ಟು	**18551**

ಆ) 1997-98ನೇ ಸಾಲಿನಲ್ಲಿ ರಾಜ್ಯಕ್ಕೆ 46,318-00 ಟನ್ ಪ್ರಮಾಣೀತ : ಗುಣಮಟ್ಟ ಬಿತ್ತನೆ ಬೀಜಗಳ ಬೇಡಿಕೆ ಇದ್ದು ಈ ಪೈಕಿ ಕೇಂದ್ರ ಸರ್ಕಾರದ ಸಂಸ್ಥೆಗಳಾದ ರಾ.ಬೀ. ನಿ. ಶೇ 2.3 ರಷ್ಟು ರಾಜ್ಯ ಸರ್ಕಾರದ ಸಂಸ್ಥೆಗಳಾದ ಕ.ರಾ.ಬೀ.ನಿ ಶೇ. 28.7 ಕೆ.ಒ.ಎಫ್ ಶೇ 4.3 ಹಾಗೂ ಖಾಸಗಿ ಸಂಸ್ಥೆಗಳು ಹಾಗೂ ಇತರೆ ರೈತರಿಂದ ರೈತರಿಗೆ ವಿತರಣೆ ಶೇ 64.7 ರಷ್ಟು ಬೀಜಗಳನ್ನು ವಿತರಣೆ ಮಾಡಲಾಗುತ್ತಿದೆ.

ಸದಲಗಾ ಕ್ಷೇತ್ರದಲ್ಲಿ ನೆರಳಿನ ಭಾಗ್ಯ ಯೋಜನೆ.

1691 - ಶ್ರೀ ಪ್ರಕಾಶ ಬಿ. ಹುಕ್ಕೇರಿ (ಸದಲಗಾ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಸದಲಗಾ ಮತಕ್ಷೇತ್ರದಲ್ಲಿ ಇದುವರೆಗೂ ನೆರಳಿನಭಾಗ್ಯ ಯೋಜನೆಯಡಿ ಪ್ರಯೋಜನ ಪಡೆದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು? (ಕಳೆದ ಮೂರು ವರ್ಷಗಳ ಮಾಹಿತಿ ನೀಡುವುದು)

ಆ) ಈ ಯೋಜನೆಗಳ ಅಡಿಯಲ್ಲಿ ಸದಲಗಾ ಮತಕ್ಷೇತ್ರಕ್ಕೆ ಇದುವರೆಗೂ ಬಿಡುಗಡೆ ಮಾಡಲಾದ ಹಣವೆಷ್ಟು? ಆ ಪೈಕಿ ಸರ್ಕಾರದ ಹಣವೆಷ್ಟು? (ಮೂರು ವರ್ಷಗಳಿಂದ ಮಾಹಿತಿ ಒದಗಿಸುವುದು).

ಇ) ಈ ಯೋಜನೆಗಳ ಕಾಮಗಾರಿಗಳು ಈಗ ಯಾವ ಹಂತದಲ್ಲಿವೆ?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು) :

ಅ) 1995-96 - ಸರ್ಕಾರದಿಂದ ಈ ವಿಧಾನಸಭಾ ಕ್ಷೇತ್ರಕ್ಕೆ ಗುರಿ ನಿಗದಿಪಡಿಸಿಲ್ಲ
1996-97 - 30 ಜನ
1997-98- ಈ ಸಾಲಿನಲ್ಲಿ ಸರ್ಕಾರದಿಂದ ಈ ವಿಧಾನಸಭಾ ಕ್ಷೇತ್ರಕ್ಕೆ ಗುರಿ ನಿಗಧಿಪಡಿಸಿರುವುದಿಲ್ಲ.

ಅ)

ವರ್ಷ	ಬಿಡುಗಡೆಯಾದ ಹಣ	ಸರ್ಕಾರದ ಹಣ	ಉಳಿದಿರುವ ಹಣ
		(ಲಕ್ಷ ರೂ. ಗಳಲ್ಲಿ)	
1995-96	-	-	-
1996-97	1.50	1.35	0.15
1997-98	-	-	-

ಇ) ಪೂರೈಕೆಯಾದ ಹೆಂಚು, ಕಟ್ಟಿಗೆಗಳನ್ನು ಫಲಾನುಭವಿಗಳಿಗೆ ವಿತರಣೆ ಮಾಡಲಾಗಿದೆ.

ಸದಲಗಾ ಮತಕ್ಷೇತ್ರದಲ್ಲಿ ಹೆಚ್ಚುವರಿ ಅಂಗನವಾಡಿಗಳ ಪ್ರಾರಂಭ

1692 - ಶ್ರೀ ಪ್ರಕಾಶ್ ಬಿ ಹುಕ್ಕೇರಿ (ಸದಲಗಾ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸದಲಗಾ ಮತ ಕ್ಷೇತ್ರದಲ್ಲಿ ಇರುವ ಅಂಗನವಾಡಿ ಕೇಂದ್ರಗಳ ಒಟ್ಟು ಸಂಖ್ಯೆ ಎಷ್ಟು? (ಗ್ರಾಮಗಳವಾರು ವಿವರಗಳನ್ನು ದೊರಕಿಸುವುದು)*

ಆ) *ಕೆಲವು ಗ್ರಾಮಗಳಲ್ಲಿ ಹೆಚ್ಚುವರಿ ಅಂಗನವಾಡಿ:ಕೇಂದ್ರಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದ್ದು ಈ ಪ್ರಸ್ತಾವನೆಯು ಈಗ ಯಾವ ಹಂತದಲ್ಲಿದೆ?*

ಇ) *ಈ ಹೆಚ್ಚುವರಿ ಕೇಂದ್ರಗಳನ್ನು ಪ್ರಾರಂಭಿಸಲು ಸರ್ಕಾರಕ್ಕೆ ಬೇಕಾಗುವ ಕಾಲಾವಕಾಶ ಎಷ್ಟು?*

ಶ್ರೀಮತಿ ವಿಮಲಾ ಬಾಯಿ ಜಗದೇವರಾವ್ ದೇಶ್ ಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು) :

ಅ) ಸದಲಗಾ ಮತ ಕ್ಷೇತ್ರದಲ್ಲಿ ಒಟ್ಟು 171 ಅಂಗನವಾಡಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಗ್ರಾಮಗಳವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಸದಲಗಾ ಮತ ಕ್ಷೇತ್ರದ 8 ಗ್ರಾಮಗಳಿಗೆ 8 ಹೆಚ್ಚುವರಿ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಇದನ್ನು ಕೇಂದ್ರ ಸರ್ಕಾರ ಒಪ್ಪಿರುವುದಿಲ್ಲ.

ಇ) ಕೇಂದ್ರ ಸರ್ಕಾರದ ಮಂಜೂರಾತಿಗೆ ಒಳಪಟ್ಟಿರುತ್ತದೆ.